ಹಾರ್ಟ್ ಆಫ್ ಡಾರ್ಕ್‌ನೆಸ್', ಮಹಾಶ್ವೇತಾದೇವಿ ಅವರ 'ಕಾಡಿನ ದಾವೇದಾರ' ಎಂಬ ಕೃತಿಗಳಲ್ಲಿ ಕಾಡನ್ನು ನಾಶಮಾಡಿದ ವಿವರಗಳಿವೆ. ಹಾಗೆಯೇ ಜಯದೇವ ಅವರೂ ಸಹ ಪ್ರತಿ ಅಧ್ಯಾಯದಲ್ಲೂ ಕಾಡಿನ ನಾಶದ ಬಗ್ಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ವಿವರಿಸುತ್ತಾ ಹೋಗುತ್ತಾರೆ. ಕಾಡಿನ ಸಂರಕ್ಷಣೆ ಮಾಡುವ, ಅದನ್ನು ಪೂಜಿಸುವ ಈ ಸೋಲಿಗರು ಕಾಡಿನ ಜೊತೆ ನಿಕಟ ಸಂಬಂಧ ಇಟ್ಟುಕೊಂಡಿದ್ದಾರೆ. ಕಾಡಿನ ನಾಶವನ್ನು ಮೌನವಾಗಿ ನೋಡುತ್ತಾ ಅಸಹಾಯಕರಾಗಿ ನಿಟ್ಟುಸಿರು ಬಿಡುತ್ತಿದ್ದಾರೆ. ಕಾಡಿನ ನಾಶದೊಂದಿಗೆ ಇಡೀ ಜೈವಿಕ ಜಾಲ ಏರುಪೇರಾಗಿ ಮಾನವ ಕುಲಕ್ಕೆ ಕಂಟಕವಾಗುತ್ತಿರುವುದರ ಬಗೆಗೆ ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಕಾಡಿನ ಮೇಲಿದ್ದ ಸೋಲಿಗರ ಅಧಿಕಾರವನ್ನು ಕಿತ್ತುಕೊಳ್ಳಲಾಗಿದೆ. ಕಾಡಿನ ನಾಶವನ್ನು ಇವರ ಮೇಲೆ ಹೇರಿ, ಕಾಡಿನಿಂದ ಓಡಿಸಲಾಗಿದೆ. ಬರಡು ಭೂಮಿಯನ್ನು ಬಿತ್ತಿ ಬೆಳೆ ಸಾಧ್ಯವಾಗದೇ ಹಸಿವು ರೋಗ ರುಜಿನಗಳಿಂದ, ಅಪೌಷ್ಟಿಕತೆಯಿಂದ ಬಳಲುವಂತೆ, ಸಾಯುವಂತೆ ಈ ವ್ಯವಸ್ಥೆ ಮಾಡಿಬಿಟ್ಟಿದೆ. ಅವರದೇ ಕಾಡನ್ನು ನಾಶಮಾಡಿ, ಅವರ ಮೇಲೆಯೇ ನಾಶದ ಆಪಾದನೆಯನ್ನು ಹೊರಿಸಿ, ಪರಿಸರದ ಶತ್ರುಗಳೆಂದು ಸೋಲಿಗರನ್ನೇ ಬಿಂಬಿಸಲಾಗುತ್ತಿದೆ. ಈ ವಿಚಾರಗಳನ್ನು ಡಾ. ಮಾದೇಗೌಡ, ಡಾ. ಜಡೇಗೌಡ, ಡಾ. ರತ್ನಮ್ಮ, ಕಾರನ ಕೇತೇಗೌಡ ಇವರ ಮಾತುಗಳನ್ನು ಓದಿದಾಗ ಮಾತ್ರ ಅದರ ಒಳನೋಟಗಳು ದಕ್ಕುತ್ತವೆ.

ಮೇಲುನೋಟಕ್ಕೆ ಇದು ವ್ಯಕ್ತಿಚಿತ್ರಗಳಂತೆ ಕಾಣುತ್ತದೆಯಾದರೂ, ಕಥನಾತ್ಮಕತೆಯಿಂದಾಗಿ ಇದು ಸೋಲಿಗರ ಬದುಕಿನ ಎಲ್ಲ ಮಗ್ಗಲುಗಳನ್ನು ಶೋಧಿಸುವುದರ ಜೊತೆಗೆ ಎಲ್ಲಾ ಆದಿವಾಸಿಗಳ ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳನ್ನು, ಆಧುನಿಕತೆಯ ಪ್ರಭಾವದಿಂದ ಉಂಟಾಗಿರುವ ಪಲ್ಲಟಗಳನ್ನು ಹಿಡಿದಿಡುತ್ತದೆ. ಪರಿಸರ ಮತ್ತು ಮನುಷ್ಯ ಸಂಬಂಧದ ಸ್ವರೂಪ, ಸಸ್ಯಗಳು, ಪ್ರಾಣಿಗಳು, ಮರ, ಗುಡ್ಡ, ಕಾಡು, ಬೆಟ್ಟಗಳು, ಅವುಗಳ ಅಗಾಧ ಸಾಧ್ಯತೆ, ನಿಗೂಢಗಳು, ಗಹನತೆಗಳನ್ನು ತಿಳಿಸುತ್ತಾ ನಾಗರಿಕ ಮಾನವನ ಕ್ಷುದ್ರತೆ, ಸಂವೇದನಾರಹಿತತೆ, ಅವನ ವಿಸಂಗತಿಯನ್ನು ಎಲ್ಲಾ ಪ್ರಸಂಗ ಅಥವಾ ವ್ಯಕ್ತಿ ಚಿತ್ರ ಇಲ್ಲವೇ ಅಧ್ಯಾಯಗಳಲ್ಲಿ ಹೇಳುವ ಕ್ರಮ ವಿನೂತನವಾಗಿದೆ. ಸೋಲಿಗ ಮತ್ತು ಅವರ ಪರಿಸರ ಮತ್ತು ನಾಗರಿಕನೆನಿಸಿಕೊಂಡಿರುವ ಮಾನವನ ನಡುವೆ ಇರುವ ತರತಮವನ್ನು ಹಿಡಿದಿಟ್ಟಿರುವುದು ಈ ಕೃತಿಯ ಮತ್ತೊಂದು ಗುರಿಯಾಗಿದೆ.

ಇಲ್ಲಿನ ನಿರೂಪಣೆ ಉತ್ತಮ ಪುರುಷದಲ್ಲಿದೆ. ಇದು ಲೇಖಕರಿಗೆ ಹಲವಾರು ಸಾಧ್ಯತೆಗಳನ್ನು ಒದಗಿಸಿದೆ. ಇಲ್ಲಿರುವ 19 ಪ್ರಸಂಗ ಅಥವಾ ವ್ಯಕ್ತಿಚಿತ್ರಗಳಲ್ಲಿ ನಿರೂಪಕರಿಗೆ ಸೋಲಿಗರ ಬದುಕು ಅವರ ಮುಗ್ಧತೆ ಮತ್ತು ಸಹಜವಾದ, ನಿಸರ್ಗಕ್ಕೆ ಹತ್ತಿರವಾದ ಬದುಕನ್ನು ವಿವರಿಸುವುದಕ್ಕಾಗಿ ಹಾಸ್ಯದ ಮಾದರಿಯೂ ಅವಕಾಶವಾಗಿ ಬಂದಿದೆ. ಬಹಳಷ್ಟು ಸಂದರ್ಭಗಳಲ್ಲಿ ವ್ಯಕ್ತಿಗಳು ತಮಾಷೆಯ ಪೇಚಿಗೆ ಸಿಕ್ಕಿಕೊಂಡ ಸ್ಥಿತಿಗಳಲ್ಲೂ ಕಾಣಿಸುತ್ತಾರೆ. ಸೋಲಿಗರ ಬೌದ್ಧಿಕ ಮಿತಿಗಳನ್ನು ಮತ್ತು ಜಾಣ್ಮೆಯನ್ನು ನಿಸರ್ಗದೊಂದಿಗೆ ಅವರು ಹೊಂದಿರುವ ಈಗಿನ ಭಿನ್ನವಾದ ಸ್ವರೂಪವನ್ನು ವಿಷಾದದ ಮಾರ್ಗದಲ್ಲಿ ವಿವರಿಸುವುದಕ್ಕಿಂತ ಹಾಸ್ಯದ ವಿಧಾನದಲ್ಲಿ ಹೇಳುವುದು ಕುತೂಹಲಕಾರಿಯಾಗಿದೆ. ವಿಷಾದದ ನೆಲೆ ಭಾವುಕತೆಯನ್ನು ತರುತ್ತದೆಯಾದ್ದರಿಂದ ಇದರಿಂದ ಪಾರಾಗಲು ಜಯದೇವ ಅವರು ಹಾಸ್ಯದ ಮಾದರಿಯನ್ನು ಅನುಸರಿಸಿರಬಹುದು. ಸೋಲಿಗರ ಒಟ್ಟು ಜೀವನದಲ್ಲಿ ಕಾಡಿನ ಪಾತ್ರ ಬಹಳ ಮುಖ್ಯವಾದದ್ದು. ಆದರೆ, ಅವರನ್ನು ಕಾಡಿನಿಂದ ಬೇರ್ಪಡಿಸಲಾಗಿದೆ. ಇದನ್ನು ಪರಿಸರವಾದಿಗಳೂ ಸಹ ಹೇಳುತ್ತಾರೆ. ಜಯದೇವ ಅವರೂ ಸಹ ಇದನ್ನೇ ಹೇಳುತ್ತಾರೆ. ಲವಲವಿಕೆಯಿಂದ ಬದುಕುವ ಸೋಲಿಗರ ಸಂಸ್ಕೃತಿಯನ್ನು ಅಧಿಕೃತವಾಗಿ ದಾಖಲಿಸುವ ಮುಂದಿನ ಅಧ್ಯಯನಕ್ಕೆ ಪೂರಕವಾಗಿರುವ ಮಾಹಿತಿಯನ್ನು ಹಾಸ್ಯದ ಮೂಲಕವೇ ದಾಖಲಿಸುವ ಈ ಕೃತಿಯು ಓದುಗರಿಗೆ, ಸಂಶೋಧನೆ ಮಾಡುವವರಿಗೆ ತುಂಬಾ ಉಪಯುಕ್ತವಾಗಿದೆ. ಜಯದೇವ ಅವರು ವಿಜ್ಞಾನ, ಮಾನವಿಕಗಳನ್ನು,